ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-12-1993.

# *ಸತ್ಯವಾದ ಸ್ನೇಹಿಯಾಗಿ ಒಬ್ಬ ತಂದೆಯ ಮೂಲಕ ಸಾಕಾರದಲ್ಲಿ ಸರ್ವ ಸಂಬಂಧಗಳ ಅನುಭವ ಮಾಡಿರಿ.*

(सच्चे स्नेही बन एक बाप द्वारा सर्व सम्बन्धों का साकार में अनुभव करो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸಾಕಾರ ಸ್ವರೂಪದಲ್ಲಿ ಸರ್ವ ಸಂಬಂಧಗಳ ಅನುಭವವನ್ನು ಮಾಡಿಸುವ ಬಾಪ್‌ದಾದಾ ತನ್ನ ಸ್ನೇಹಿ ಮಕ್ಕಳ ಪ್ರತಿ ಹೇಳಿದರು.**

ಇಂದು ವಿಶ್ವ ಸ್ನೇಹಿ ಬಾಪ್‌ದಾದಾರವರು ತನ್ನ ಅತ್ಯಂತ ಸ್ನೇಹಿಯಾಗಿರುವ ಹಾಗೂ ಸದಾ ತಂದೆಯ ಸಂಗಾತಿ ಅಥವಾ ಸಹಯೋಗಿ ಆತ್ಮರನ್ನು ನೋಡುತ್ತಿದ್ದಾರೆ. ನಾಲ್ಕೂ ಕಡೆಯಲ್ಲಿನ ಸರ್ವ ಬ್ರಾಹ್ಮಣ ಆತ್ಮರು ಅವಶ್ಯವಾಗಿ ಸ್ನೇಹಿಯಾಗಿರುವರು. ಸ್ನೇಹವೇ ನಿಮ್ಮನ್ನು ಬ್ರಾಹ್ಮಣ ಜೀವನಕ್ಕೆ ಪರಿವರ್ತನೆ ಮಾಡಿತು. ಆದರೂ ಮೂರು ಪ್ರಕಾರದ ಸ್ನೇಹಿಗಳಿದ್ದಾರೆ- 1.ಸ್ನೇಹ ಮಾಡುವವರು, 2.ಸ್ನೇಹ ವನ್ನು ನಿಭಾಯಿಸುವವರು ಮತ್ತು 3. ಸ್ನೇಹದಲ್ಲಿ ಸಮಾವೇಶ(ಲೀನ)ವಾಗಿರುವವರು. ಸಮಾವೇಶ ಅರ್ಥಾತ್ ಸಮಾನರಾಗುವುದು.

**1.ಸ್ನೇಹ ಮಾಡುವವರು** - ಕೆಲವೊಮ್ಮೆ ಸ್ನೇಹ ಮಾಡುತ್ತಾರೆ ಆದರೆ ಮಾಡುತ್ತಾ-ಮಾಡುತ್ತಾ ಕೆಲವೊಮ್ಮೆ ಸ್ನೇಹವು ತುಂಡಾಗಿಬಿಡುತ್ತದೆ, ಕೆಲವೊಮ್ಮೆ ಜೋಡಣೆಯಾಗುತ್ತದೆ. ಆದ್ದರಿಂದ ಸಮಯಾನುಸಾರ ಸ್ನೇಹ ಜೋಡಿಸುವುದಕ್ಕಾಗಿಯೇ ಪುರುಷಾರ್ಥ ಮಾಡಬೇಕಾಗುತ್ತದೆ. ಏಕೆಂದರೆ ತಂದೆಯ ಜೊತೆ-ಜೊತೆ ಮತ್ತೆಲ್ಲಿಯಾದರೂ ವ್ಯಕ್ತಿ ಅಥವಾ ಪ್ರಕೃತಿಯ ಸಾಧನಗಳೊಂದಿಗೆ ಸಂಕಲ್ಪದಲ್ಲಾದರೂ ಸ್ನೇಹವಿದ್ದರೆ, ತಂದೆಯೊಂದಿಗೆ ಸ್ನೇಹ ಮಾಡುವವರ ಪಟ್ಟಿಯಲ್ಲಿ ಬಂದುಬಿಡುತ್ತಾರೆ. ಸ್ನೇಹದ ಚಿಹ್ನೆಯಾಗಿದೆ- ಪರಿಶ್ರಮವಿಲ್ಲದೆ ಸ್ನೇಹಿಯ ಕಡೆಗೆ ಸ್ವತಹವಾಗಿಯೇ ಸ್ನೇಹವಾಗಿಬಿಡುತ್ತದೆ. ಸ್ನೇಹ ಮಾಡುವಂತಹ ಆತ್ಮನ ಪ್ರತೀ  ಸಮಯ, ಪ್ರತಿಯೊಂದು ಸ್ಥಿತಿ. ಪ್ರತಿಯೊಂದು ಪರಿಸ್ಥಿತಿಯಲ್ಲಿ ಆಧಾರ ಅನುಭವವಾಗಿರುತ್ತದೆ. ಒಂದುವೇಳೆ ಸಾಧನಗಳೊಂದಿಗೆ ಸ್ನೇಹವಿದ್ದರೆ ಆ ಸಮಯದಲ್ಲಿ ತಂದೆಗಿಂತಲೂ ಹೆಚ್ಚಾಗಿ ಸಾಧನದ ಆಧಾರ ಅರ್ಥಾತ್ ಆಶ್ರಯದ ಅನುಭವವಾಗುತ್ತದೆ. ಆ ಸಮಯದಲ್ಲಿ ಆ ಆತ್ಮನ ಸಂಕಲ್ಪದಲ್ಲಿ ತಂದೆಯ ಸ್ನೇಹವು ನೆನಪಿಗೂ ಬರುತ್ತದೆ, ಯೋಚನೆಯೂ ನಡೆಯುತ್ತದೆ- ತಂದೆಯ ಸ್ನೇಹವು ಶ್ರೇಷ್ಠವಾಗಿದೆ ಆದರೆ ಈ ಸಾಧನ ಅಥವಾ ವ್ಯಕ್ತಿಯ ಆಧಾರವೂ ಅವಶ್ಯಕವಿದೆ. ಆದ್ದರಿಂದ ಎರಡೂ ಕಡೆ ಸ್ನೇಹವು ಅಪೂರ್ಣವಾಗಿಬಿಡುತ್ತದೆ ಹಾಗೂ ಪುನಃ ಪುನಃ ಸ್ನೇಹವನ್ನು ಜೋಡಿಸಬೇಕಾಗುತ್ತದೆ. ಒಂದು ಬಲ, ಒಂದು ಭರವಸೆಗೆ ಬದಲಾಗಿ ಮತ್ಯಾವುದೋ ಭರವಸೆಯ ಜೊತೆ(ಸಾಂಗತ್ಯ) ಅವಶ್ಯಕವೆನಿಸುತ್ತದೆ. ಆದ್ದರಿಂದ ತಂದೆಯ ಸ್ನೇಹದ ಮೂಲಕ ಯಾವ ಸರ್ವಪ್ರಾಪ್ತಿಯ ಅನುಭವವಾಗಿದೆಯೋ, ಅದಕ್ಕೆ ಬದಲು ಅನ್ಯರ ಆಶ್ರಯದ ಮೂಲಕ ಅಲ್ಪಕಾಲದ ಪ್ರಾಪ್ತಿಯು ತನ್ನಕಡೆಗೆ ಆಕರ್ಷಣೆ ಮಾಡಿಬಿಡುತ್ತದೆ. ಎಷ್ಟು ಆಕರ್ಷಣೆ ಮಾಡುತ್ತದೆ ಎಂದರೆ ಅವರು ಅದನ್ನೇ ಅವಶ್ಯಕವೆಂದು ತಿಳಿದುಕೊಳ್ಳುವರು. ಸೆಳೆತವೆಂದು ತಿಳಿಯುವುದಿಲ್ಲ ಆದರೆ ಆಶ್ರಯವೆಂದು ತಿಳಿಯುತ್ತಾರೆ. ಇವರನ್ನೇ ಸ್ನೇಹ ಮಾಡುವವರು ಎಂದು ಹೇಳಲಾಗುತ್ತದೆ.

**2.ಸ್ನೇಹ ನಿಭಾಯಿಸುವವರು** -ಸ್ನೇಹ ಮಾಡುವುದರ ಜೊತೆ-ಜೊತೆ ನಿಭಾಯಿಸುವ ಶಕ್ತಿಯೂ ಇರುತ್ತದೆ. ನಿಭಾಯಿಸುವುದು ಅರ್ಥಾತ್ ಸ್ನೇಹದ ಪ್ರತ್ಯುತ್ತರ ಕೊಡುವುದು, ರಿಟರ್ನ್ ಕೊಡುವುದು. ಸ್ನೇಹಿ ತಂದೆಯು ಮಕ್ಕಳಿಂದ ಯಾವ ಶ್ರೇಷ್ಠ ಆಶೆಯನ್ನಿಡುತ್ತಾರೆಯೋ ಆ ಸರ್ವ ಆಶೆಗಳನ್ನು ಪ್ರತ್ಯಕ್ಷದಲ್ಲಿ ಪೂರ್ಣಗೊಳಿಸುವುದು ಸ್ನೇಹದ ರಿಟರ್ನ್ ಆಗಿದೆ. ಅಂದಮೇಲೆ ನಿಭಾಯಿಸುವವರು ಬಹಳಷ್ಟು ಪ್ರತ್ಯಕ್ಷದಲ್ಲಿ ಮಾಡಿತೋರಿಸುತ್ತಾರೆ ಆದರೆ ಸದಾ ತಂದೆಯ ಸಮಾನ ಅರ್ಥಾತ್ ಸಮಾವೇಶ ಆಗಿರುವ ಅನುಭೂತಿ ಕೆಲವೊಮ್ಮೆ ಆಗುತ್ತದೆ. ಕೆಲವೊಮ್ಮೆ ಆಗುವುದಿಲ್ಲ. ಆದರೂ ನಿಭಾಯಿಸುವವರು ಸಮೀಪವಿದ್ದಾರೆ ಆದರೆ ಸಮಾನರಾಗಿಲ್ಲ. ನಿಭಾಯಿಸುವವರು ನಿಭಾಯಿಸುವುದರ ರಿಟರ್ನಲ್ಲಿ ವಿಶೇಷವಾಗಿ ತಂದೆಯ ಮೂಲಕ ಪದಮದಷ್ಟು ಧೈರ್ಯ ಹಾಗೂ ಒಲವು- ಉತ್ಸಾಹದ ಸಹಯೋಗವು ಸಿಗುತ್ತಿರುತ್ತದೆ.

**3.ಸ್ನೇಹದಲ್ಲಿ ಸಮಾವೇಶವಾಗಿರುವವರು-** ಆ ಆತ್ಮರ ನಯನಗಳಲ್ಲಿ, ಮುಖದಲ್ಲಿ, ಸಂಕಲ್ಪದಲ್ಲಿ ಪ್ರತೀ ಕರ್ಮದಲ್ಲಿ ಸಹಜ ಹಾಗೂ ಸ್ವತಹವಾಗಿ ಸ್ನೇಹಿ ತಂದೆಯ ಜೊತೆಯ(ಸಾಂಗತ್ಯ) ಅನುಭವವು ಸದಾ ಆಗುತ್ತಿರುತ್ತದೆ. ತಂದೆಯು ಅವರಿಂದ

ದೂರವಿಲ್ಲ ಹಾಗೂ ಅವರು ತಂದೆಯಿಂದ ದೂರವಿಲ್ಲ. ಪ್ರತೀ ಸಮಯದಲ್ಲಿ ತಂದೆಯ ಸ್ನೇಹದ ರಿಟರ್ನ್ ನಲ್ಲಿ ಪ್ರಾಪ್ತಿಯಾದ ಸರ್ವಪ್ರಾಪ್ತಿಗಳಲ್ಲಿ ಸಂಪನ್ನ ಹಾಗೂ ಸಂತುಷ್ಟವಾಗಿ ಇರುತ್ತಾರೆ. ಆದ್ದರಿಂದ ಮತ್ತ್ಯಾವುದೇ ಪ್ರಕಾರದ ಆಶ್ರಯವು ಅವರನ್ನು ಆಕರ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಯಾವುದಾದರೊಂದು ಅಲ್ಪಕಾಲದ ಪ್ರಾಪ್ತಿಯ ಅವಶ್ಯಕತೆಯು ಮತ್ತ್ಯಾರಿಗೋ ಆಶ್ರಯವನ್ನಾಗಿ ಮಾಡುತ್ತದೆ ಅರ್ಥಾತ್ ಸಂಪೂರ್ಣ ಸ್ನೇಹದಲ್ಲಿ ಅಂತರವಾಗುತ್ತದೆ. ಸ್ನೇಹದಲ್ಲಿ ಸಮಾವೇಶವಾಗಿರುವ ಆತ್ಮರು ಸದಾ ಸರ್ವ ಪ್ರಾಪ್ತಿ ಸಂಪನ್ನರಾಗಿರುವ ಕಾರಣ ಸಹಜವಾಗಿಯೇ 'ಒಬ್ಬ ತಂದೆಯ ಹೊರತು ಮತ್ತ್ಯಾರೂ ಇಲ್ಲ' ಎಂಬ ಅನುಭೂತಿಯಲ್ಲಿ ಇರುತ್ತಾರೆ. ಅಂದಾಗ ಸ್ನೇಹಿಯಂತೂ ಎಲ್ಲರೂ ಆಗಿದ್ದಾರೆ ಆದರೆ ಮೂರು ಪ್ರಕಾರದಲ್ಲಿದ್ದಾರೆ. ಸ್ನೇಹಿಯಾಗಿರುವ ಕಾರಣದಿಂದ ಬ್ರಾಹ್ಮಣ ಜೀವನದಲ್ಲಿ ನಡೆಯುತ್ತಿದ್ದೀರಿ ಆದರೆ ಸ್ನೇಹದ ಜೊತೆಗೆ ನಿಭಾಯಿಸುವ ಶಕ್ತಿಯಿರಬೇಕು. ಇದರಲ್ಲಿ ನಂಬರ್‌ವಾರ್ ಆಗಿಬಿಡುತ್ತಾರೆ. ಸ್ನೇಹದ ಜೊತೆ ಶಕ್ತಿಯೂ ಅವಶ್ಯಕವಿದೆ. ಇದರಲ್ಲಿ ಸ್ನೇಹ ಹಾಗೂ ಶಕ್ತಿ' ಎರಡರ ಸಮತೋಲನವಿರುವವರೇ ತಂದೆಯ ಸಮಾನರಾಗುವರು. ಈ ರೀತಿ ಸಮಾವೇಶವಾಗಿರುವ ಆತ್ಮರ ಅನುಭವದಲ್ಲಿ ಇದೇ ಇರುತ್ತದೆ- ತಂದೆಯ ಸ್ನೇಹದಿಂದ ದೂರವಾಗುವುದು ಕಷ್ಟವಾಗುತ್ತದೆ. ಸಮಾವೇಶವಾಗುವುದು ಸಹಜವಿರುತ್ತದೆ. ದೂರವಾಗುವುದು ಕಷ್ಟವಾಗುತ್ತದೆ. ಏಕೆಂದರೆ ಸಮಾವೇಶ ಆಗಿರುವ ಆತ್ಮರಿಗಾಗಿ ತಂದೆಯೇ ತಮ್ಮ ಪ್ರಪಂಚವಾಗಿರುತ್ತಾರೆ.

ಪ್ರಪಂಚದಲ್ಲಿ ಆಕರ್ಷಿಸುವಂತಹ ಎರಡೇ ಮಾತುಗಳಿವೆ- ಒಂದು ವ್ಯಕ್ತಿಯ ಸಂಬಂಧ ಹಾಗೂ ಇನ್ನೊಂದು ಭಿನ್ನ-ಭಿನ್ನ ವೈಭವ ಅಥವಾ ಸಾಧನಗಳ ಮೂಲಕ ಪ್ರಾಪ್ತಿಯಾಗುವುದು. ಅಂದಾಗ ಸಮಾವೇಶವಾಗಿರುವ ಆತ್ಮನಿಗಾಗಿ ಒಬ್ಬ ತಂದೆಯ ಮೂಲಕ ಸರ್ವ ಸಂಬಂಧದ ಪ್ರಾಪ್ತಿಯ ಅನುಭವವು ಸದಾಕಾಲಕ್ಕಾಗಿ ಆಗುತ್ತದೆ. ಸರ್ವ ಪ್ರಾಪ್ತಿಗಳ ಆಧಾರವು ಒಬ್ಬ ತಂದೆಯಾಗಿದ್ದಾರೆ ವೈಭವವೂ ಅಲ್ಲ ಅಥವಾ ಸಾಧನವೂ ಅಲ್ಲ. ವೈಭವ ಅಥವಾ ಸಾಧನವು ರಚನೆಯಾಗಿದೆ ಮತ್ತು ತಂದೆಯು ರಚಯಿತನಾಗಿದ್ದಾರೆ. ಯಾರಿಗೆ ರಚಯಿತನು ಆಧಾರವೋ ಅವರಿಗೆ ರಚನೆಯಿಂದ ಲಭಿಸಿರುವ ಅಲ್ಪಕಾಲಿಕ ಪ್ರಾಪ್ತಿಯ ಬಗ್ಗೆ ಸಂಕಲ್ಪ ಅಥವಾ ಸ್ವಪ್ನವೂ ಬರುವುದಿಲ್ಲ ವೈಭವ ಅಥವಾ ಸಾಧನೆಗಳು ಎಂಬುವು ರಚನೆ. ಬಾಪ್‌ದಾದಾರವರಿಗೆ ಕೆಲವೊಮ್ಮೆ ಮಕ್ಕಳ ಸ್ಥಿತಿಯನ್ನು ನೋಡುತ್ತಾ ನಗು ಬರುತ್ತಿರುತ್ತದೆ. ಏಕೆಂದರೆ ಆಶ್ಚರ್ಯವೆಂದು ಹೇಳಲು ಸಾಧ್ಯವಿಲ್ಲ. ಪೂರ್ಣವಿರಾಮವಿದೆ. ನಡೆಯುತ್ತಾ-ನಡೆಯುತ್ತಾ ಬೀಜವನ್ನು ಬಿಟ್ಟು ರೆಂಬೆ-ಕೊಂಬೆಗಳಲ್ಲಿ ಆಕರ್ಷಿತರಾಗಿಬಿಡುತ್ತಾರೆ. ಯಾವುದಾದರೂ ಆತ್ಮನನ್ನು ಆಧಾರವನ್ನಾಗಿ ಮಾಡಿಕೊಂಡುಬಿಡುತ್ತಾರೆ. ಸಾಧನಗಳನ್ನು ಆಧಾರ ಮಾಡಿಕೊಳ್ಳುತ್ತಾರೆ ಏಕೆಂದರೆ ಬೀಜದ ರಂಗು-ರೂಪ ಶೋಭನೀಯವಾಗಿರುವುದಿಲ್ಲ ಮತ್ತು ರೆಂಬೆ- ಕೊಂಬೆಗಳ ರೂಪ-ರಂಗು ಬಹಳ ಶೋಭನೀಯವಾಗಿ ಇರುತ್ತದೆ. ದೇಹಧಾರಿಯ ಸಂಬಂಧದ ಆಧಾರ ದೇಹಭಾನದ ಸಹಜ ಅನುಭವ ಮಾಡಿಸುತ್ತದೆ ಮತ್ತು ತಂದೆಯ ಆಧಾರದಿಂದ ದೇಹಭಾನದಿಂದ ದೂರವಾಗುವ ಅನುಭವವಾಗುತ್ತದೆ. ದೇಹದ ಪರಿವೆಯಲ್ಲಿ ಬರುವ ಅಭ್ಯಾಸವಂತೂ ಇದ್ದೇ ಇದೆ. ಬಯಸದಿದ್ದರೂ ಆಗಿಬಿಡುತ್ತದೆ. ಆದ್ದರಿಂದ ದೇಹಧಾರಿಯ ಸಂಬಂಧದ ಆಧಾರ ಅಥವಾ ಆಶ್ರಯವು ಸಹಜವಾಗಿ ಅನುಭವವಾಗುತ್ತದೆ. ಇದು ಸರಿಯಿಲ್ಲ ಎಂದು ತಿಳಿಯುತ್ತಾರೆ ಆದರೂ ಆಶ್ರಯವನ್ನಾಗಿ ಮಾಡಿಕೊಳ್ಳುತ್ತಾರೆ. ಇದನ್ನು ಬಾಪ್‌ದಾದಾರವರು ನೋಡಿ-ನೋಡಿ ಮುಗುಳ್ನಗುತ್ತಾ ಇರುತ್ತಾರೆ. ಆ

ಸಮಯದ ಸ್ಥಿತಿಯು ನಗುವಂತದ್ದಾಗಿರುತ್ತದೆ. ಹೇಗೆ ತಾವುಗಳು ಕ್ಲಾಸ್ ಗಳಲ್ಲಿ ಅಥವಾ ಭಾಷಣಗಳಲ್ಲಿ ಒಂದು ಗಿಣಿ ಕಥೆಯನ್ನು ತಿಳಿಸುತ್ತೀರಿ- ಗಿಣಿಗೆ ನಲ್ಲಿಯ ಮೇಲೆ ಕುಳಿತುಕೊಳ್ಳಬೇಡ ಎಂದು ಹೇಳಲಾಯಿತು ಆದರೆ ಅದು ನಲ್ಲಿಯ ಮೇಲೆ ಕುಳಿತು ಹಿಂತಿರುಗೀ ಅದನ್ನೇ ಹೇಳುತ್ತಿತ್ತು. ಇದೇರೀತಿ ಮಕ್ಕಳೂ ಸಹ ಆ ಸಮಯದಲ್ಲಿ ಮನಸ್ಸಿನಲ್ಲಿ ತನ್ನೊಂದಿಗೆ ತಾನು 'ಇದನ್ನೇ ಯೋಚಿಸುತ್ತಿರುತ್ತಾರೆ ಆದರೆ ಜೊತೆಜೊತೆಗೆ ಸ್ಥೂಲದಲ್ಲಂತೂ ಆಶ್ರಯವಿರಬೇಕು ಎಂದು ಯೋಚಿಸುತ್ತಿದ್ದಾರೆ. ಆ ಸಮಯದಲ್ಲಿ ನಗು ಬರುತ್ತದೆ ಅಲ್ಲವೆ ಹಾಗೂ ಆ ಸಮಯದಲ್ಲಿ ಮಾಯೆಯೂ ಅವಕಾಶ ತೆಗೆದುಕೊಳ್ಳುತ್ತದೆ. ಆ ಸುಳ್ಳಿನ ಆಶ್ರಯವೇ ಸತ್ಯ ಆಶ್ರಯವೆಂದು ಅನುಭವವಾಗುತ್ತದೆ. ಹೇಗೆ ಇತ್ತೀಚೆಗೆ ಅಸತ್ಯವು ಸತ್ಯಕ್ಕಿಂತಲೂ ಇಷ್ಟವಾಗುತ್ತದೆ. ಆ ಸಮಯಕ್ಕೆ ತಪ್ಪೇ ಸರಿಯೆಂದು ಅನುಭವವಾಗುವುದು. ಅಸತ್ಯ ಸಾಂಗತ್ಯ ಎಂಬ ಸುಳ್ಳಿನ ವಿಷಯವನ್ನು ಪಕ್ಕಾ ಮಾಡಲು ಅಥವಾ ಅಸತ್ಯದ ಆಶ್ರಯವನ್ನು ಪಕ್ಕಾ ಮಾಡಲು ಅಥವಾ ಅಸತ್ಯವನ್ನು ಸತ್ಯವಾಗಿ ಪ್ರಮಾಣಿಕರಿಸಲು ಸ್ತಂಭಗಳನ್ನು ಹಾಕಿ ಬಲಹೀನ ಸ್ಥಾನವನ್ನು ಗಟ್ಟಿಯಾಗಿ ಮಾಡುವಂತೆ ಮಾಯೆಯೂ ಕೂಡ ಬಲಹೀನ ಸಂಕಲ್ಪವನ್ನು ಗಟ್ಟಿಯಾಗಿ ಮಾಡಲು ಬಹಳ ಸೂಕ್ಷ್ಮ ಸ್ತಂಭಗಳನ್ನು ಹಾಕುತ್ತದೆ. ಎಂತಹ ಸ್ತಂಭಗಳನ್ನು ಹಾಕುತ್ತದೆ! ಈ ರೀತಿಯಾಗಿ ಆಗುತ್ತಿರುತ್ತದೆ, ದೊಡ್ಡ-ದೊಡ್ಡವರೂ ಸಹ ಹೀಗೆಯೇ ಮಾಡುತ್ತಾರೆ, ಹೀಗೆಯೇ ನಡೆಯುತ್ತಾರೆ, ಈಗಂತು ಪುರುಷಾರ್ಥಿಗಳಾಗಿದ್ದೇವೆ. ಸಂಪೂರ್ಣರಂತೂ ಆಗಿಲ್ಲ ಅಂದಮೇಲೆ ಅವಶ್ಯವಾಗಿ ಈಗ ಏನಾದರೊಂದು ಕೊರತೆಯಿದ್ದೇ ಇರುತ್ತದೆ. ಮುಂದೆ ನಡೆದಂತೆ ಸಂಪೂರ್ಣರಾಗಿಬಿಡುತೇವೆ. ಇಂತಿಂತಹ ರೀತಿಯಲ್ಲಿ ವ್ಯರ್ಥ ಸಂಕಲ್ಪವೆಂಬ ಪಿಲ್ಲರ್ ಬಲಹೀನತೆಯನ್ನು ಸಮರ್ಥವನ್ನಾಗಿ ಮಾಡಿಬಿಡುತ್ತದೆ. ಇಂತಹ ಸ್ತಂಭಗಳನ್ನು ಆಧಾರವಾಗಿ ಮಾಡಿಕೊಳ್ಳಬಾರದು. ಸಮಯ ಬಂದಾಗ ಈ ಮಾನವ ನಿರ್ಮಿತ ಆಧಾರವು ಮೋಸ ಮಾಡಿಬಿಡುತದೆ. ಸದಾ ಒಬ್ಬ ತಂದೆಯನ್ನು ಸರ್ವ ಸಂಬಂಧಗಳ ಆಶ್ರಯವಾಗಿ ಮಾಡಿಕೊಳ್ಳಬೇಕು, ಇದರ ಅನುಭವ ಕಡಿಮೆ ಮಾಡುತ್ತಿದ್ದೀರಿ. ಈ ಸರ್ವ ಸಂಬಂಧಗಳ ಅನುಭವವನ್ನು ಹೆಚ್ಚಿಸಿಕೊಳ್ಳಿರಿ. ಸರ್ವ ನಂಬಂಧಗಳ ಅನುಭೂತಿಯು ಕಡಿಮೆಯಾಗುವ ಕಾರಣದಿಂದ ಯಾವುದೋ ಒಂದು ಅಲ್ಪಕಾಲದ ಸಂಬಂಧದೊಂದಿಗೆ ಜೋಡಣೆಯಾಗಿಬಿಡುತ್ತದೆ. ಸ್ಥೂಲ ಜೀವನದಲ್ಲಿಯೂ ಸ್ಥೂಲ ರೂಪದ ಆಶ್ರಯ ಅಥವಾ ಪ್ರತಿಯೊಂದು ಪರಿಸ್ಥಿತಿಯಲ್ಲಿ ಸ್ಥೂಲ ರೂಪದಲ್ಲಿ ಸಹಯೋಗ ಕೊಡುವವಂತಹ ಆಶ್ರಯ ತಂದೆಯಾಗಿದ್ದಾರೆ. ಈ ಅನುಭವವನ್ನು ವೃದ್ಧಿ ಮಾಡಿಕೊಳ್ಳಿರಿ. ತಂದೆಯಂತೂ ಸೂಕ್ಷ್ಮ ದಲ್ಲಿಯೂ ಸಹಯೋಗ ಕೊಡುವವರಾಗಿದ್ದಾರೆ. ನಿರಾಕಾರನಾಗಿದ್ದಾರೆ, ಆಕಾರನಾಗಿದ್ದಾರೆ ಆದರೆ ಸಾಕಾರವಂತೂ ಅಲ್ಲವಲ್ಲ ಎಂದು ತಿಳಿಯಬೇಡಿ. ಆದರೆ ಪ್ರತಿಯೊಂದು ಸಂಬಂಧವನ್ನು ಸಾಕಾರ ರೂಪದಲ್ಲಿ ಅನುಭವ ಮಾಡಬಹುದು. ಸಾಕಾರ ಸ್ವರೂಪದಲ್ಲಿ ಜೊತೆಯ ಅನುಭವ ಮಾಡಬಹುದು. ಈ ಅನುಭೂತಿಯನ್ನು ಆಳವಾಗಿ ತಿಳಿದುಕೊಳ್ಳಿರಿ ಹಾಗೂ ಸ್ವಯಂನ್ನೂ ಇದರಲ್ಲಿಯೇ ಸಮರ್ಥ ಮಾಡಿಕೊಳ್ಳಿರಿ. ಇದರಿಂದ ವ್ಯಕ್ತಿ, ವೈಭವ ಅಥವಾ ಸಾಧನಗಳು ತನ್ನ ಕಡೆಗೆ ಆಕರ್ಷಿಸುವುದಿಲ್ಲ. ಸಾಧನಗಳನ್ನು ನಿಮಿತ್ತವಾಗಿ ಕಾರ್ಯದಲ್ಲಿ ಉಪಯೋಗಿಸಿ ಅಥವಾ ಸಾಕ್ಷಿಯಾಗಿದ್ದು ಸೇವೆಗಾಗಿ ಕಾರ್ಯದಲ್ಲಿ ಉಪಯೋಗಿಸಬೇಕು- ಇಂತಹ ಅನುಭೂತಿಯನ್ನು ಹೆಚ್ಚಿಸಿಕೊಳ್ಳಿರಿ. ಆಶ್ರಯವನ್ನಾಗಿ ಮಾಡಿಕೊಳ್ಳಬಾರದು, ನಿಮಿತ್ತವಷ್ಟೇ. ಇವರನ್ನೇ ಸ್ನೇಹದಲ್ಲಿ ಸಮಾವೇಶವಾಗಿರುವ ಸಮಾನ ಆತ್ಮರೆಂದು ಹೇಳಲಾಗುತ್ತದೆ. ಹಾಗಾದರೆ ತಾವು ಯಾರು ಎಂದು ಯೋಚಿಸಿರಿ- ತಿಳಿಯಿತೆ? ಒಳ್ಳೆಯದು!

**ಸದಾ ಸ್ನೇಹದಲ್ಲಿ ಸಮಾವೇಶವಾಗಿರುವ ಸಮಾನ ಆತ್ಮರಿಗೆ, ಸದಾ ಒಬ್ಬ ತಂದೆಯಿಂದ ಸರ್ವ ಸಂಬಂಧದ ಅನುಭವ ಮಾಡುವಂತಹ ಅತ್ಮರಿಗೆ, ಸದಾ ಒಬ್ಬ ತಂದೆಯನ್ನು ಆಧಾರಮೂರ್ತಿ, ಸತ್ಯ ಆಶ್ರಯದ ಅನುಭವ ಮಾಡುವಂತಹ ಆತ್ಮರಿಗೆ, ಸದಾ ಸರ್ವಪ್ರಾಪ್ತಿಗಳನ್ನು ರಚಯಿತ ತಂದೆಯ ಮೂಲಕ ಅನುಭವ ಮಾಡುವಂತಹ ಆತ್ಮರಿಗೆ, ಸದಾ ಸಹಜ-ಸ್ವತಹ ಒಂದು ಬಲ, ಒಂದು ಭರವಸೆಯ ಅನುಭವ ಮಾಡುವಂತಹ ಸತ್ಯ ಸ್ನೇಹಿ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ವಾರ್ತಾಲಾಪ:-**

ಸದಾ ಸಮಾವೇಶವಾಗಿ ಇದ್ದೀರಾ ಅಥವಾ ನೆನಪು ಮಾಡುವ ಪರಿಶ್ರಮ ಪಡಬೇಕಾಗುತ್ತದೆಯೇ? ಒಬ್ಬ ತಂದೆಯ ಹೊರತು ಮತ್ತಾರೂ ಕಾಣಿಸುವುದಿಲ್ಲ. ಯಾವಾಗ ಕಥೆಗಳನ್ನು ಕೇಳುತ್ತೀರಿ ಆಗ ನಗು ಬರುತ್ತದೆಯಲ್ಲವೆ .ಕಥೆಯು ಎಲ್ಲಿಯವರೆಗೆ ನಡೆಯುತ್ತದೆಯೋ ಅಲ್ಲಿಯವರೆಗೆ ಅರ್ಥವಾಗುವುದಿಲ್ಲ. ನಂತರ ಯಾವಾಗ ಕಥೆಯು ಸಮಾಪ್ತಿಯಾಗುವುದೋ ಆಗ ಇದೇನಾಯಿತು? ಎಂದು ಯೋಚಿಸುತ್ತಾರೆ. ನಾನೇ ಇದ್ದೇನಾ ಅಥವಾ ಮತ್ಯಾರಾದರೂ ಇದ್ದರೆ ಎನುವಂತೆಯೂ ಯೋಚಿಸುತ್ತಾರೆ. ಏಕೆಂದರೆ ಆ ಸಮಯದಲ್ಲಿ ಪರವಶರಾಗುತ್ತಾರೆ ಅಲ್ಲವೆ. ಅಂದರೆ ಪರವಶರು ತನ್ನ ಜಾಗೃತ ಅವಸ್ಥೆಯಲ್ಲಿ ಇರುವುದಿಲ್ಲ. ಯಾವಾಗ ಜಾಗೃತ ಅವಸ್ಥೆಯಲ್ಲಿ ಬರುತ್ತಾರೆಯೋ ಆಗ ಮುಂದೆ ನಡೆಯುವ ಉತ್ಸಾಹವೂ ಬರುತ್ತದೆ. ಸಂಘಟನೆಯು ವೃದ್ಧಿಯಾಗುತ್ತಿದೆ ಹಾಗೂ ವೃದ್ಧಿಯಾಗುತ್ತಾ ಇರುತ್ತದೆ. ಮತ್ತೆ ನಿಮಿತ್ತವಾದ ನೀವಾತ್ಮರು ಇದೆಲ್ಲಾ ಆಟವನ್ನು ನೋಡುತ್ತಾ ಹರ್ಷಿತವಾಗುತ್ತಾ ಇರುತ್ತೀರಿ. ಎಲ್ಲರೂ ನಡೆಯುತ್ತಿದ್ದಾರೆ. ಕೆಲವರು ನಡೆಯುತ್ತಿದ್ದಾರೆ. ಕೆಲವರು ಹಾರುತ್ತಿದ್ದಾರೆ ಮತ್ತು ತಾವುಗಳು ಏನು ಮಾಡುತ್ತೀರಿ' ಹಾರುತ್ತಾ ಹಾರುತ್ತಾ ಜೊತೆಯಲ್ಲಿ ಅನ್ಯರನ್ನೂ ಹಾರಿಸುತ್ತಾ ಇರುತ್ತೀರಿ. ಏಕೆಂದರೆ ದಯಾಸಾಗರ ತಂದೆಯ ದಯಾಹೃದಯ ಆತ್ಮರಾಗಿದ್ದೀರಿ, ಆದ್ದರಿಂದ ದಯೆ ಬರುತ್ತದೆ ಅಲ್ಲವೆ, ತಿರಸ್ಕಾರ ಬರುವುದಿಲ್ಲ ಆದರೆ ದಯೆ ಬರುತ್ತದೆ. ಈ ದಯೆಯೇ ಹೃದಯದ ಪ್ರೀತಿಯ ಕಾರ್ಯ ಮಾಡುತ್ತದೆ. ಒಳ್ಳೆಯದು-ಯಾರೆಲ್ಲರೂ ನಡೆಯುತ್ತಿದ್ದಾರೆ ಬಹಳಚೆನ್ನಾಗಿ ನಡೆಯುತ್ತಿದ್ದಾರೆ. ಅವಿಶ್ರಾಂತರಾಗಿ ಸೇವೆಯನ್ನು ಮಾಡುತ್ತಿದ್ದಾರಲ್ಲವೆ. ನಿಮಿತ್ತ ಅತ್ಮರ ಅವಿಶ್ರಾಂತವಾಗಿರುವುದನ್ನು ನೋಡುತ್ತಾ ಸರ್ವರಲ್ಲಿ ಒಲವುಂಟಾಗುತ್ತದೆ ಅಲ್ಲವೆ.

**ಅವ್ಯಕ್ತ ಬಾಪ್ ದಾದಾರವರ ವ್ಯಕ್ತಿಗತ ವಾರ್ತಾಪ:-**

ಸಾಧಾರಣತೆಯನ್ನು ಸಮಾಪ್ತಿಗೊಳಿಸಿ ವಿಶೇಷತೆಯ ಸಂಸ್ಕಾರವನ್ನು ಸ್ವಾಭಾವಿಕ ಹಾಗೂ ಸ್ವಭಾವವನ್ನಾಗಿ ಮಾಡಿಕೊಳ್ಳಲಿ ತಮ್ಮನ್ನು ಸದಾ ಸಂಗಮಯುಗದ ಆತ್ಮಿಕ ಮೋಜಿನಲ್ಲಿರುವ ಅನುಭವ ಮಾಡುತ್ತೀರಾ? ಮೋಜಿನಲ್ಲಿ ಇರುತ್ತೀರಾ ಅಥವಾ ಕೆಲವೊಮ್ಮೆ ಮೋಜಿನಲ್ಲಿ. ಕೆಲವೊಮ್ಮೆ ಮುದುಡಿರುವಂತೆಯೂ ಇರುತ್ತೀರಾ ಅಥವಾ ಸದಾ ಮೋಜಿನಲ್ಲಿ ಇರುತ್ತೀರಾ? ಕ್ಷೇಮ ಸಮಾಚಾರವೇನಿದೆ? ಯಾವಾಗ ಯಾವುದೇ ಅಂತಹ ಪರಿಸ್ಥಿತಿಯೇನಾದರೂ ಬಂದುಬಿಟ್ಟಿತು ಅಥವಾ ಅಂತಹ ಯಾವುದೇ ಪರೀಕ್ಷೆಯೇ ಬಂದಿತೆಂದರೆ ಮುದುಡುತ್ತೀರಾ(ಗೊಂದಲ)? (ಸ್ವಲ್ಪ ಸಮಯಕ್ಕಾಗಿ) ಹಾಗೆಯೇ ಆ ಸ್ವಲ್ಪ ಸಮಯದಲ್ಲೇನಾದರೂ ತಮಗಾಗಿ ಕಾಲ(ಮೃತ್ಯು) ಬಂದುಬಿಟ್ಟಿತೆಂದರೆ

ಏನಾಗಿಬಿಡುತ್ತದೆ? ಅಕಾಲ ಮೃತ್ಯುವಿನ ಸಮಯವಂತೂ ಇದೆಯಲ್ಲವೇ. ಒಂದು ವೇಳೆ ಸ್ವಲ್ಪ ಸಮಯಕ್ಕಾದರೂ ಮೋಜಿಗೆ ಬದಲು ಗೊಂದಲಕ್ಕೆ ಒಳಗಾಗುತ್ತೀರಾ ಮತ್ತು ಆ ಸಮಯದಲ್ಲಿ ಅಂತಿಮ ಗಳಿಗೆಯೇನಾದರೂ ಆಗಿಬಿಟ್ಟಿತೆಂದರೆ ಅಂತ್ಯ ಮತಿ ಸೋ ಗತಿ ಏನಾಗುವುದು? ಆದ್ದರಿಂದ ಸದಾ ಎವರೆಡಿ ಆಗಿರಿ ಎನ್ನುವುದನ್ನು ಕೇಳಿಸಿಕೊಳ್ಳುತ್ತಾ ಇದ್ದೀರಲ್ಲವೆ ಎವರೆಡಿಯ ಅರ್ಥವೇನಾಗಿದೆ? ಈ ರೀತಿ ಪ್ರತೀ ಗಳಿಗೆ ಎವರೆಡಿಯಾಗಿ ಇದ್ದೀರಾ? ಯಾವುದೇ ಸಮಸ್ಯೆಯು ಸಂಪೂರ್ಣರಾಗುವುದರಲ್ಲಿ ವಿಘ್ನ ರೂಪವಾಗಬಾರದು ಅಂತ್ಯವು ಒಳ್ಳೆಯದಾಗಿದ್ದರೆ ಭವಿಷ್ಯ ಆದಿಯೂ ಒಳ್ಳೆಯದಾಗಿರುತ್ತದೆ. ಎಂತಹ ಮತದಲ್ಲಿ ಇರುತ್ತೀರಿ ಅಂತಹ ಗತಿಯಾಗುತ್ತದೆ. ಇದಕ್ಕಾಗಿಯೇ ಎವರೆಡಿ ಪಾಠವನ್ನು ಓದಿಸಲಾಗುತ್ತಿದೆ. ಈ ರೀತಿ ಯೋಚಿಸಬಾರದು- ಸ್ವಲ್ಪ ಸಮಯವಷ್ಟೇ ಗೊಂದಲರಾಗುತ್ತೇವೆ ಆದರೆ ಸ್ವಲ್ಪ ಸಮಯವೂ ಸಹ, ಒಂದು ಸೆಕೆಂಡಿನಲ್ಲಿಯೂ ಮೋಸ ಮಾಡಿಬಿಡಬಹುದು ಆ ರೀತಿಯೇನೂ ಹೆಚ್ಚು ಸಮಯ ನಡೆಯುವುದಿಲ್ಲ. ಎರಡು ಅಥವಾ ನಾಲ್ಕು ನಿಮಿಷಗಳಷ್ಟೇ ನಡೆಯುತ್ತದೆ ಎಂದು ಯೋಚಿಸುತ್ತಾರೆ ಆದರೆ ಒಂದು ಸೆಕೆಂಡಿನಲ್ಲಿಯೂ ಸಹ ಮೋಸ ಮಾಡಿಬಿಡಬಹುದು. ಅಂದಮೇಲೆ ನಿಮಿಷದ ಮಾತನ್ನಂತೂ ಯೋಚಿಸಬಾರದು ಏಕೆಂದರೆ ಸರ್ವ ಶ್ರೇಷ್ಠ ಅತ್ಮರಾಗಿದ್ದೀರಿ, ಅಮೂಲ್ಯವಾಗಿದ್ದೀರಿ. ಅಮೂಲ್ಯ ಅತ್ಮರ ಮೌಲ್ಯವು ಪ್ರಪಂಚದವರೊಂದಿಗೆ ಹೋಲಿಕೆ ಮಾಡಲು ಸಾಧ್ಯವಿಲ್ಲ. ಪ್ರಪಂಚದವರಂತೂ ತಮ್ಮೆಲ್ಲರನ್ನೂ ಸಾಧಾರಣರೆಂದು ತಿಳಿಯುತ್ತಾರೆ ಆದರೆ ತಾವು ವಿಶೇಷ ಅತ್ಮನ ಅರ್ಥವೇ ಇದಾಗಿದೆ- ಅವರು ಯಾವುದೇ ಕರ್ಮ ಮಾಡುತ್ತಾರೆ. ಯಾವುದೇ ಸಂಕಲ್ಪ ಮಾಡುತ್ತಾರೆ, ಏನೇ ಮಾತನಾಡುತ್ತಾರೆ. ಪ್ರತಿಯೊಂದು ಮಾತು ಹಾಗೂ ಪ್ರತಿಯೊಂದು ಸಂಕಲ್ಪ ವಿಶೇಷವಾಗಿದೆ. ಸಾಧಾರಣ ಆಗಿರಬಾರದು ಸಮಯ ಸಾಧಾರಣವಾಗಿ ಹೋಗಬಾರದು. ಪ್ರತಿ ಸೆಕೆಂಡ್ ಹಾಗೂ ಪ್ರತೀ ಸಂಕಲ್ಪ ವಿಶೇಷವಾಗಿದ್ದರೆ ಹೇಳಲಾಗುತ್ತದೆ- ವಿಶೇಷ ಅತ್ಮ. ಹಾಗಾದರೆ ವಿಶೇಷ ಮಾಡುತ್ತಾ-ಮಾಡುತ್ತಾ ಸಾಧಾರಣರಾಗಿಬಿಡಬಾರದು. ಇದನ್ನು ಪರಿಶೀಲಿಸಿರಿ. ಕೆಲವರು ಈ ರೀತಿಯೂ ಯೋಚಿಸುತ್ತಾರೆ- ಯಾವುದೇ ತಪ್ಪನ್ನಂತು ಮಾಡಲಿಲ್ಲ. ಯಾವುದೇ ಪಾಪ ಕರ್ಮವನ್ನಂತು ಮಾಡಲಿಲ್ಲ. ವಾಣಿಯಿಂದಲೂ ಯಾವುದೇ ಅಂತಹ ಉಲ್ಟಾ-ಸುಲ್ಟಾ ಶಬ್ಧವನ್ನು ಉಪಯೋಗಿಸಲಿಲ್ಲ ಆದರೆ ಭವಿಷ್ಯ ಹಾಗು ವರ್ತಮಾನವನ್ನು ಶ್ರೇಷ್ಠವಾಗಿ. ಉಪಯೋಗಿಸಿದಿರೇ? ವ್ಯರ್ಥ ಮಾಡಲಿಲ್ಲ ಆದರೆ ಸಮರ್ಥವಾಗಿ ಇದ್ದಿತೆ? ಕೇವಲ ಇಷ್ಟನ್ನೇ ಪರಿಶೀಲನೆ ಮಾಡುವುದಲ್ಲ ಆದರೆ ವ್ಯರ್ಥ ಅಥವಾ ಕೆಡುಕಿನ ಜಾಗದಲ್ಲಿ ಬಹಳ ಒಳ್ಳೆಯದನ್ನು ಮಾಡಿದ್ದೀರಾ ಅಥವಾ ಸಾಧಾರಣವಾಯಿತೆ? ಅಂದಮೇಲೆ ಈ ರೀತಿ ಸಾಧಾರಣತೆಂಬರಬಾರದು, ಶ್ರೇಷ್ಠತೆಯಿರಲಿ, ನಷ್ಟವಾಗಲಿಲ್ಲ ಆದರೆ ಜಮಾ ಆಯಿತೆ? ಏಕೆಂದರೆ ಜಮಾ ಮಾಡಿಕೊಳ್ಳುವಂತಹ ಸಮಯ ಈಗಲ್ಲವೆ. ಈಗ ಜಮಾ ಮಾಡಿರುವುದನ್ನು ಭವಿಷ್ಯದ ಅನೇಕ ಜನ್ಮಗಳಲ್ಲಿ ಅನುಭವಿಸುತ್ತಾ ಇರುತ್ತೀರಿ. ಹಾಗಾದರೆ ಎಷ್ಟು ಜಮಾ ಆಗುತ್ತದೆಯೋ ಅಷ್ಟೇ ಅನುಭವಿಸುತ್ತೀರಲ್ಲವೆ. ಒಂದುವೇಳೆ ಜಮಾ ಮಾಡುವುದು ಕಡಿಮೆ ಆಯಿತೆಂದರೆ ಕಡಿಮೆ ಅನುಭವಿಸಬೇಕಾಗುವುದು ಅರ್ಥಾತ್ ಪ್ರಾಲಬ್ಧವು ಕಡಿಮೆಯಾಗುವುದು. ಆದರೆ ಲಕ್ಷ್ಯವಂತು ಇದೆ- ಶ್ರೇಷ್ಠ ಪ್ರಾಲಬ್ಧ ಪಡೆಯುವುದಾಗಿದೆಯೇ ಅಥವಾ ಸಾಧಾರಣರಾದರೂ ಪರವಾಗಿಲ್ಲವೇ? ಸ್ವರ್ಗದಲ್ಲಂತು ಬಂದುಬಿಡುವಿರಿ, ದುಃಖವಂತು ಆಗುವುದಿಲ್ಲ, ಸಾಧಾರಣರಾದರೆ ಈ ಪರವಾಗಿಲ್ಲವೇ? ಪರವಾಗಿಲ್ಲವೆ ಅಥವಾ ನಡೆಯುತ್ತದೆಯೇ? ಪರಿಶೀಲನೆ ಮಾಡಿಕೊಳ್ಳಿರಿ- ಪ್ರತೀ ಸೆಕೆಂಡ್. ಪ್ರತೀ ಸಂಕಲ್ಪವು ವಿಶೇಷವಾಗಿರಲಿ ಹೇಗೆ ಅರ್ಧ ಕಲ್ಪದಿಂದ ಬಯಸದಿದ್ದರೂ ದೇಹಭಾನದ ಅಭ್ಯಾಸವು ಸ್ವಾಭಾವಿಕವಾಗಿಯೇ ನಡೆಯುತ್ತಾ ಇರುತ್ತವೆಯಲ್ಲವೆ. ದೇಹ

ಅಭಿಮಾನದಲ್ಲಿ ಬರುವುದು ಸ್ವಾಭಾವಿಕವಾಗಿದೆ ಅಲ್ಲವೆ. ಅದೇರೀತಿ ದೇಹಿ- ಅಭಿಮಾನಿ ಸ್ಥಿತಿಯು ಸ್ವಾಭಾವಿಕ ಮತ್ತು ಸ್ವಭಾವವಾಗಲಿ ಇದರಿಂದ ಯಾವ ಸ್ವಭಾವವಾಗುತ್ತದೆಯೋ ಅದು ಸ್ವತಹವಾಗಿಯೇ ತನ್ನ ಕಾರ್ಯವನ್ನು ಮಾಡುತ್ತದೆ. ಯೋಚಿಸಬೇಕಾಗುವುದಿಲ್ಲ. ಮಾಡಬೇಕಾಗುವುದಿಲ್ಲ. ತಯಾರು ಮಾಡಬೇಕಾಗುವುದಿಲ್ಲ ಆದರೆ ಸ್ವತಹವಾಗಿಯೇ ಆಗಿಬಿಡುತ್ತದೆ. ಹಾಗಾದರೆ ಇಂತಹ ವಿಶೇಷತೆಯ ಸಂಸ್ಕಾರವು 4 ಸ್ಥಳವಾಗಿ ಬಿಡಲಿ ಮತ್ತು ಪ್ರತಿಯೊಬ್ಬ ಹೃದಯದಿಂದ ಇದು ನನ್ನ ಸ್ವಭಾವವಾಗಿದೆ ಎಂದು ಬರಲಿ. ಆದರೆ ಈ ರೀತಿಯಾಗಬಾರದು ನನ್ನ ಸ್ವಭಾವವು ಇದಾಗಿದೆ. ನನ್ನ ಸ್ವಭಾವ ಇದೆಲ್ಲವೇ ಅಲ್ಲ, ಪ್ರತಿಯೊಬ್ಬರ ಮುಖದಿಂದ, ಮನಸ್ಸಿನಿಂದ ಇದೇ ಬರಲಿ- ನನ್ನ ಸ್ವಭಾವವಿರುವುದೇ ವಿಶೇಷ ಅತ್ಮನ ವಿಶೇಷತೆಯ ರೀತಿಯದೆಯೇ ಅಥವಾ ಕಷ್ಟ ಪಡಬೇಕಾಗುವುದೇ? ಸ್ವಭಾವವಾಗಿದ್ದಾರೆ ಪರಿಶ್ರಮ ಪಡಬೇಕಾಗಿರುವುದಿಲ್ಲ. ಕೆಲವರ ಸ್ವಭಾವ. ಹಾಗಾದರೆ ಈ ಸ್ವಭಾವ ರಮಣೀಕವಾಗಿ ಇರುವುದಾದರೆ, ಸ್ವತಹವಾಗಿಯೇ ರಮಣೀಕತೆ ನಡೆಯುತ್ತಾ ಇರುತ್ತದೆಯಲ್ಲವೆ. ಅವರಿಗೆ ನಾನೇನು ಮಾಡಿದೆನ್ನುವುದೂ ಗೊತ್ತಾಗುವುದಿಲ್ಲ. ಯಾರೇ ಹೇಳಿದಾಗಲೂ ಹೇಳುವರು ನಾನೇನು ಮಾಡಲಿ. ಇದು ನನ್ನ ಸ್ಥಭಾವವಾಗಿದೆ. ಅದೇರೀತಿ ವಿಶೇಷತೆಯದೂ ಇಂತಹ ಸ್ವಭಾವವಾಗಿ ಬಿಡಲಿ. ತಮ್ಮ ಸ್ವಭಾವವೇನು? ಎಂದು ಯಾರಾದರೂ ಕೇಳಿದಾಗ ಎಲ್ಲರ ಹೃದಯದಿಂದ ಬರಲಿ- ನಮ್ಮ ಸ್ವಭಾವವೇ ಏಶೇಷತೆಯದಾಗಿದೆ. ಸಾಧಾರಣ ಕರ್ಮವು ಸಮಾಪ್ತಿಯಾಗಿಬಿಟ್ಟಿತು. ಏಕೆಂದರೆ ಮರುಜೀವಿಯಾಗಿದ್ದೀರಲ್ಲವೆ. ಅಂದಮೇಲೆ ಸಾಧಾರಣತೆಯಿಂದ ಮರಣ ಹೊಂದಿದಿರಿ, ವಿಶೇಷತೆಯಲ್ಲಿ ಜೀವಿಸುತ್ತಿದ್ದೀರಿ ಅಂದರೆ ಹೊಸ ಜನ್ಮವಾಗಿದೆ. ಇದರಿಂದ ಸಾಧಾರಣತೆಯು ಹಳೆಯ ಜನ್ಮದ್ದಾಗಿದೆ. ಈಗಿನದಲ್ಲ ಏಕೆಂದರೆ ಹೊಸ ಜನ್ಮವನ್ನು ಪಡೆದಿದ್ದೀರಿ. ಈ ಜನ್ಮದ ಸ್ವಭಾವವು ವಿಶೇಷತೆಯದಾಗಿದೆ ಎಂಬ ಅನುಭವವಾಗಲಿ, ಹಾಗಾದರೆ ಈಗೇನು ಮಾಡುವಿರಿ? ಸಾಧಾರಣತೆ ಸಮಾಪ್ತಿ. ಸಂಕಲ್ಪದಲ್ಲಿಯೂ ಸಾಧಾರಣೆ ಇರಬಾರದು.

ಮಾತೆಯರು ಮೋಜಿನಲ್ಲಿ ಇರುತ್ತೀರಾ? ಯಾರೆಷ್ಟು ಗೊಂದಲಕ್ಕೊಳಗಾಗುವಂತೆ ಮಾಡುವ ಪ್ರಯತ್ನಪಡಲಿ ಆದರೆ ತಾವು ಮೋಜಿನಲ್ಲಿರಿ, ಗೊಂದಲದಲ್ಲಿ ಹಾಕುವವರು ಗೊಂದಲಕ್ಕೊಳಗಾಗಲಿ ಆದರೆ ತಾವಾಗಬಾರದು. ಏಕೆಂದರೆ ಅಜ್ಞಾನಿಗಳ ಕೆಲಸವೇ ಗೊಂದಲ ಮಾಡುವುದು ಮತ್ತು ಜ್ಞಾನಿಗಳ ಕಾರ್ಯವಾಗಿದೆ- ಮೋಜಿನಲ್ಲಿರುವುದು. ಹಾಗಾದರೆ ಅವರು ತಮ್ಮ ಕಾರ್ಯ ಮಾಡಲಿ ಮತ್ತು ತಾವು ತಮ್ಮ ಕಾರ್ಯ ಮಾಡಿರಿ. ಸದಾ ಮೋಜಿನ ಅನುಭವ ಮಾಡುತ್ತೀರೆಂದರೆ ನಶೇಯಿಂದ ಹೇಳುವುದಕ್ಕೂ ಸಾಧ್ಯವಾಗುವುದು. ಹೀಗಾದಾಗಲೇ ಹೇಳಲು ಸಾಧ್ಯವಾಗುವುದಿಲ್ಲವೇ? ಯಾರು ಆಗುವುದಿಲ್ಲವೋ ಹೇಳುವುದಕ್ಕೂ ಸಾಧ್ಯವಾಗುವುದಿಲ್ಲ. ಚಾಲೆಂಜ್ ಸಹ ಮಾಡಬಹುದು- ನಾವು ಗೊಂದಲಕ್ಕೆ ಒಳಗಾಗುವವರಲ್ಲ ಏಕೆಂದರೆ ವಿಶೇಷ ಆತ್ಮರಾಗಿದ್ದೇವೆ, ಏನು ನೆನಪು ಮಾಡುವಿರಿ? ಮೋಜಿನಲ್ಲಿರುವ ವಿಶೇಷ ಆತ್ಮರಾಗಿದ್ದೇವೆ. ಇಂತಹ ಸಾಹಸವುಳ್ಳವರಲ್ಲವೆ. ಸಾಹಸವಿರುವವರಿಗೆ ಸಹಯೋಗವು ಸ್ವತಹವಾಗಿಯೇ ಸಿಗುವುದು.

ರಿವೈಸ್ ಕೋರ್ಸ್ 16-12-1993.

***ಸತ್ಯವಾದ ಸ್ನೇಹಿಯಾಗಿ ಒಬ್ಬ ತಂದೆಯ ಮೂಲಕ ಸಾಕಾರದಲ್ಲಿ ಸರ್ವ ಸಂಬಂಧಗಳ ಅನುಭವ ಮಾಡಿರಿ***

ಸರ್ವ ಬ್ರಾಹ್ಮಣ ಆತ್ಮರು ಸ್ನೇಹಿಯಾಗಿಯಂತೂ ಅವಶ್ಯಕವಾಗಿ ಇರುವರು ಆದರೆ ಮೂರು ಪ್ರಕಾರದ ಸ್ನೇಹಿಗಳಿದ್ದಾರೆ. 1.ಸ್ನೇಹ ಮಾಡುವವರು. 2.ಸ್ನೇಹವನ್ನು ನಿಭಾಯಿಸುವವರು ಮತ್ತು 3.ಸ್ನೇಹದಲ್ಲಿ ಸಮಾವೇಶ (ಲೀನ)ವಾಗಿರುವವರು ಸಮಾವೇಶ ಅರ್ಥಾತ್ ಸಮಾನರಾಗುವುದು. ಈ ಮೂರು ವಿಧವಾದ ಮಕ್ಕಳ ಬಗ್ಗೆ ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಸ್ನೇಹದಲ್ಲಿ ಸಮಾವೇಶವಾಗಿರುವ ನನ್ನ ನಯನಗಳಲ್ಲಿ, ಮುಖದಲ್ಲಿ, ಸಂಕಲ್ಪದಲ್ಲಿ, ಪ್ರತಿಯೊಂದು ಕರ್ಮದಲ್ಲಿ ಸಹಜ ಹಾಗೂ ಸ್ವತಹವಾಗಿ ಸ್ನೇಹದ ಅನುಭವ ಆಗುತ್ತಿರುತ್ತದೆ.

3. ನಾನು ಪ್ರತೀ ಸಮಯ ತಂದೆಯ ಸ್ನೇಹದ ರಿಟರ್ನ್ ನಲ್ಲಿ ಪ್ರಾಪ್ತಿಯಾದ ಸರ್ವಪ್ರಾಪ್ತಿಗಳಲ್ಲಿ ಸಂಪನ್ನ ಹಾಗೂ ಸಂತುಷ್ಟವಾಗಿ ಇದ್ದೇನೆ.

4. ನಾನು ಸಹಜವಾಗಿ ಒಬ್ಬ ತಂದೆಯ ಹೊರತು ಮತ್ಯಾರೂ ಇಲ್ಲ ಎಂಬ ಅನುಭವವನ್ನು ಮಾಡುವ ಸತ್ಯವಾದ ಸ್ನೇಹಿಯಾಗಿದ್ದೇನೆ.

5. ನಾನು ಸ್ನೇಹ ಹಾಗೂ ಶಕ್ತಿಯ ಸಮತೋಲನವನ್ನು ಇಟ್ಟು ತಂದೆಯ ಸಮಾನವಾಗಿ ತಯಾರಾಗಿದ್ದೇನೆ.

6. ನಾನು ಎಲ್ಲಾ ಆಶ್ರಯಗಳನ್ನು ಬಿಟ್ಟು ಸದಾ ಒಬ್ಬ ತಂದೆಯೊಂದಿಗೆ ಸರ್ವ ಸಂಬಂಧಗಳ ಆಶ್ರಯವನ್ನು ತಯಾರು ಮಾಡಿಕೊಂಡಿರುವ ಸತ್ಯವಾದ ಸ್ನೇಹಿ.